ಕ್ರೋಢೀಕರಿಸಿ, ಹೆಚ್ಚು ಪ್ರದೇಶಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆಯೇ? ಆ ಬಗ್ಗೆ ಯೋಚಿಸಿದ್ದೀರಾ?

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಹಳ ಗಹನವಾದಂಥ ವಿಷಯವನ್ನು ಹೇಳಿದ್ದಾರೆ. ಈಗಾಗಲೇ ಅಗ್ರಿಕಲ್ಚರ್ ಡೆವಲೆಪ್‌ಮೆಂಟ್ ಕಾರ್ಪೊರೇಷನ್ ಮಾಡಲಿಕ್ಕೆ ನಾವು ಯೋಚಿಸಿದ್ದೇವೆ, ಇದನ್ನು ಈ ವರ್ಷವೇ ಅದನ್ನು ರಿಜಿಸ್ಟರ್ ಮಾಡಿಸಿ ಮಾಡಿಸಬೇಕೆಂದು ಪ್ರಯತ್ನ ಮಾಡಿದ್ದೇವೆ. ನಮ್ಮ ಆರ್ಥಿಕ ಮಂತ್ರಿಗಳು ಈ ಸಾರಿ ಒಂದು ಹತ್ತು ತಿಂಗಳು ಆ ವಿಚಾರ ಬಿಡಿ ನಂತರ ಅದನ್ನು ಮಾಡಿ ಅದಕ್ಕೆ ನಾನು ನಂತರ ಬೇರೆ ಹಣವನ್ನು ಒದಗಿಸುತ್ತೇನೆಂದು ಹೇಳಿದ್ದರಿಂದ ಅದನ್ನು ತೆಗೆದುಕೊಂಡು, ಈಗ ಯಾವ ರೀತಿಯಲ್ಲಿ ಕೃಷ್ಣಾ, ಕಾವೇರಿ ಕಣಿವೆಯಲ್ಲಿ ಹಣವನ್ನು ಎತ್ತಿ ಅದರಲ್ಲಿ ಏನು ಅಭಿವೃದ್ಧಿಪಡಿಸುತ್ತಿದ್ದಾರೆ, ಅದೇ ರೀತಿ ನಾವು ಇದರ ಮೂಲಕ ಹಣವನ್ನು ಎತ್ತಿ ಇಡೀ ಬಯಲು ಸೀಮೆಯನ್ನು ನಾವು ಅಭಿವೃದ್ಧಿಪಡಿಸುವಂಥದ್ದನ್ನು ತೀರ್ಮಾನ ಮಾಡಿ ಅದಕ್ಕೋಸ್ಕರವೇ ನಾನು ಮೂರು ವರ್ಷದಲ್ಲಿ ಈ ಕಾರ್ಯಕ್ರಮವನ್ನು ಮಾಡುತ್ತೇವೆಂದು ಹೇಳಿದ್ದು. ಇದನ್ನು ಮಾಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ.ಎಸ್. ಬಸವರಾಜು : ಮಾನ್ಯ ಅಧ್ಯಕ್ಷರೆ, ಅರಸೀಕೆರೆ ತಾಲ್ಲೂಕಿನಲ್ಲಿ ಒಂದು ಜಲಾನಯನ ಸಂಸ್ಥೆ ಇದೆ, ಅಲ್ಲಿ ಯಾವುದೇ ಕೆಲಸವಾಗುತ್ತಿಲ್ಲ ಕೇವಲ ಸಂಬಳ ಕೊಡುವುದು ಬಿಟ್ಟರೆ ಬೇರೆ ಏನೂ ಇಲ್ಲ. ಅಲ್ಲಿ ರೈತರಿಗೆ ಸರಿಯಾದಂಥ ಮಾಹಿತಿಯನ್ನು ಕೊಡುವುದಿಲ್ಲ, ಅಲ್ಲಿ ಹೊಂಡ ಹಾಕಬೇಕು ಇದರಿಂದ ನೀರು ಹಿಂಗುತ್ತದೆಂದು ನೀವು ಹೇಳಿದಿರಿ, ಆದರೆ ಅಲ್ಲಿ ಅವರು ಯಾವುದೇ ಕೆಲಸವನ್ನು ಮಾಡುತ್ತಿಲ್ಲ, ದಯಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಕೃಷಿ ಮಾರುಕಟ್ಟೆ ಇಲಾಖೆಯಿಂದ ಗ್ರಾಮೀಣ ರಸ್ತೆಗಳ ಅಭಿವೃದ್ಧಿ

22 (262) : ಶ್ರೀ ಶ್ರೀರಾಮ ರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ಮಾರುಕಟ್ಟೆ ಇಲಾಖೆಯಿಂದ ಪ್ರಸಕ್ತ ವರ್ಷ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಸರ್ಕಾರಕ್ಕಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಆ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು):

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆ ಕೇಳಿರತಕ್ಕಂಥದ್ದು, ಹಳ್ಳಿಗಾಡಿನ ಪ್ರದೇಶದಲ್ಲಿ ಹಿಂದೆ ಮಾನ್ಯ ನಾಗಪ್ಪನವರು ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ, ರಿಮೋಟ್ ವಿಲೇಜೆಸ್ ಏನು ಇವೆ, ಅಲ್ಲಿ ರೈತರು ಬೆಳೆದಂಥ ಮಾಲನ್ನು ಮಾರುಕಟ್ಟೆಗೆ ಸಾಗಿಸಲಿಕ್ಕೆ ಬೇಕು ಎಂದು ಉದ್ದೇಶ ಇಟ್ಟುಕೊಂಡು ರಸ್ತೆ ಕೆಲಸ ಪ್ರಾರಂಭಿಸಿದರು. ಮೇನ್ ರೋಡ್‌ಗಳಿಗೆ ಲಿಂಕ್ ರೋಡ್ ಬರುವ ರೀತಿಯಲ್ಲಿ ಮಾಡಿದರು. ಇದು ಬಹಳ ಯಶಸ್ವಿಯಾಗಿ ನಡೆಯಿತು. ಇದನ್ನು

ಸರ್ಕಾರ ಏಕೆ ನಿಲ್ಲಿಸಿದೆ? ನಿಲ್ಲಿಸಿರತಕ್ಕಂಥ ಉದ್ದೇಶ ಏನು? ಹಣಕಾಸು ಇಲ್ಲದಿರುವುದರಿಂದ ನಿಲ್ಲಿಸಿದಿರೋ ಅಥವಾ ಆ ಕಾರ್ಯಕ್ರಮವೇ ವೇಸ್ಟ್ ಎಂದು ನಿಲ್ಲಿಸಿದಿರೋ? ಏಕೆಂದರೆ, ಬಹಳ ಪ್ರಮುಖವಾಗಿ ಇವತ್ತು ರೈತರಿಗೆ ತಾವು ಬೆಳೆದಂಥ ಉತ್ಪನ್ನಗಳನ್ನು ಮಾರುಕಟ್ಟೆಗೆ ಸೇರಿಸಲಿಕ್ಕೆ ಬೇಕಾಗಿರುವಂಥ ವ್ಯವಸ್ಥೆಗಳು ಇಲ್ಲ. ಅದು ರೀಮೋಟ್ ವಿಲೇಜೆಸ್, ಯಾವುದೇ ಸೌಲಭ್ಯ ಇಲ್ಲದಿರತಕ್ಕಂಥ ಹಳ್ಳಿಗಳಲ್ಲಿ ಅವರು ಬೆಳೆಯುತ್ತಾರೆ. ಅಲ್ಲಿಂದ ಸಾಗಿಸಬೇಕಾದರೆ ರಸ್ತೆಗಳಿಲ್ಲ. ಅಂಥ ಪರಿಸ್ಥಿತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಲಕ್ಷಾಂತರ ಹಳ್ಳಿಗಳು ಇರತಕ್ಕಂಥ ಸಂದರ್ಭದಲ್ಲಿ ಯಾಕೆ ಈ ಯೋಜನೆಯನ್ನು ನಿಲ್ಲಿಸಿದಿರಿ ಎನ್ನುವುದನ್ನು ಸ್ಪಷ್ಟವಾಗಿ ಉತ್ತರ ಕೊಡಬೇಕು ಮತ್ತು ಅದನ್ನು ಮುಂದುವರಿಸುವ ಯೋಜನೆ ಇಲ್ಲವೆಂದು ಹೇಳುತ್ತಿದ್ದೀರಿ, ಅಂದರೆ ನಿಮ್ಮ ಉದ್ದೇಶ ಏನು? ಏಕೆ ಮುಂದುವರಿಸಲು ಆಗುವುದಿಲ್ಲವೆಂಬುದನ್ನು ಹೇಳಬೇಕು.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ನಮ್ಮ ಹಿರಿಯ ಶಾಸಕರು ಹೇಳಿದ್ದು, ಮಾನ್ಯ ದಿವಂಗತ ನಾಗಪ್ಪನವರು ಇದ್ದಾಗ ಪ್ರತಿ ಎಪಿಎಂಸಿ ಯಿಂದ 15 ಲಕ್ಷ ರೂಪಾಯಿಯ ಅನುದಾನದಲ್ಲಿ ಆ ರಸ್ತೆಗಳನ್ನು ಮಾಡುತ್ತಿದ್ದರು. ಎಷ್ಟೋ ಎಪಿಎಂಸಿ ಗಳು ಲಾಭದಲ್ಲಿ ಇಲ್ಲದೇ ಇರುವುದರಿಂದ, ಎಲ್ಲಿ ಲಾಭದಲ್ಲಿ ಎಪಿಎಂಸಿಗಳು ಇವೆಯೋ ಅವುಗಳನ್ನು ಬೇರೆ ಎಪಿಎಂಸಿ ಗಳಿಗೆ ಕೊಟ್ಟು ಆ ರಸ್ತೆಗಳನ್ನು ಮಾಡುವಂಥ ವ್ಯವಸ್ಥೆಯಿತ್ತು. ಲಾಭದಲ್ಲಿ ಇಲ್ಲವೆಂದು ತಿಳಿದುಕೊಂಡು ಆ ಯೋಜನೆಯನ್ನು ನಿಲ್ಲಿಸಿದ್ದರಿಂದ, ಈಗಾಗಲೇ ನಮ್ಮ ಎಪಿಎಂಸಿ ಕಾನೂನಿನ 60 (ಸಿ) ಯಲ್ಲಿ ಮಾರುಕಟ್ಟೆಗೆ ಏನು ಕರ ಬರುತ್ತದೆ, ಆ ಕರದಲ್ಲಿ ಆ ರಸ್ತೆಗಳನ್ನು ಮಾಡಬಹುದು. ಸುಮಾರು ಒಂದೂವರೆ ಕೋಟಿ ರೂಪಾಯಿ ಮೇಲೆ ಎಲ್ಲಿ ಎಪಿಎಂಸಿಗೆ ಹಣ ಬರುತ್ತದೆ ಅಲ್ಲಿ ಸುಮಾರು 30 ಲಕ್ಷ ರೂವರೆಗೆ ರಸ್ತೆಯಾಗಲೀ ಕುಡಿಯುವ ನೀರಿನ ವ್ಯವಸ್ಥೆಯಾಗಲಿ ಮಾಡಬಹುದು. ಅದಲ್ಲದೆ ಒಂದು ಕೋಟಿ ರೂ. ನಿಂದ ಒಂದೂವರೆ ಕೋಟಿ ರೂ.ಗೆ 15 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬಹುದು. ಈ ರೀತಿ ಅವರು ತಮ್ಮ ಎಪಿಎಂಸಿ ಯೋಜನೆಯಲ್ಲಿಯೇ ರಸ್ತೆಯಾಗಲೀ ಕುಡಿಯುವ ನೀರಿನ ವ್ಯವಸ್ಥೆಯಾಗಲೀ ಮಾಡಬಹುದು. ಈಗಾಗಲೇ ನಾವೂ ಕೂಡ ಒಂದು ವಿಚಾರವನ್ನು ಮಾಡಿದ್ದೇವೆ. ಏನೆಂದರೆ, ಈ ಆರ್‌ಐಡಿಎಫ್ ಯೋಜನೆ 9 ರಲ್ಲಿ ಗ್ರಾಮೀಣ ಸಂತೆಗಳನ್ನು ತೆಗೆದುಕೊಂಡಿದ್ದಾರೆ, ಅಂದರೆ ಸುಮಾರು ಆರ್‌ಐಡಿಎಫ್ 6ರ ಯೋಜನೆಯ ಅಡಿಯಲ್ಲಿ 21 ಕೋಟಿ ರೂ. ಅದೇ ಪ್ರಕಾರ 16 ಗ್ರಾಮೀಣ ಸಂತೆಗಳನ್ನು 20 ಕೋಟಿ ರೂಪಾಯಿ, ಈ ರೀತಿ ಗ್ರಾಮೀಣ ಸಂತೆಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಹಣವನ್ನು ಆರ್‌ಐಡಿಎಫ್ 6 ಮತ್ತು 7 ಮತ್ತು 9ರಲ್ಲಿ ತೆಗೆದುಕೊಂಡಿದ್ದಾರೆ. ನಾವು ಕೂಡ ಈ ಆರ್‌ಐಡಿಎಫ್ ಯೋಜನೆ ಮುಂದುವರಿದರೆ, ಪ್ರತಿಯೊಂದು ಎಪಿಎಂಸಿಗೆ ಸುಮಾರು 25 ರಿಂದ 50 ಲಕ್ಷ ರೂಪಾಯಿವರೆಗೆ ಒಂದು ಅಂದಾಜು ಪತ್ರಿಕೆಯನ್ನು ತಯಾರಿಸಿ, ಈಗಾಗಲೇ ನಮ್ಮ ಶ್ರೀರಾಮ ರೆಡ್ಡಿಯವರು ಹೇಳಿದ ಪ್ರಕಾರ ಆ ಸಂಪರ್ಕ ರಸ್ತೆಗಳನ್ನು ತೆಗೆದುಕೊಳ್ಳಬೇಕು ಎನ್ನುವ ವಿಚಾರ ಇಟ್ಟುಕೊಂಡಿದ್ದೇವೆ, ಅವರ ಜೊತೆಯಲ್ಲಿ ನಾನು ಮಾತನಾಡಿ ಯಾವ ರೀತಿಯಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕು, ಅದರ ಬಗ್ಗೆ ಕಾರ್ಯಕ್ರಮ ಪ್ರಾಮಾಣೀಕವಾಗಿ ಹಾಕುತ್ತೇನೆಂದು ತಮ್ಮ ಮೂಲಕ ನಾನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಮಾನ್ಯ ಸದಸ್ಯರು : ಮಾನ್ಯ ಸಚಿವರು ರಸ್ತೆಗಳ ಬಗ್ಗೆ ಹೇಳಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದು ಎರಡು ಹಂತ.,

ಅಧ್ಯಕ್ಷರು : ಸುಮ್ಮನೆ ಇದು ಏಕೆ? ರಸ್ತೆಗಳನ್ನು ಅಭಿವೃದ್ಧಿ ಮಾಡುವುದು ಸರ್ಕಾರದ ಕರ್ತವ್ಯ. ಅವರು ಹಣಕಾಸಿನ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಸಪ್ಲಿಮೆಂಟರಿ ಪ್ರಶ್ನೆಗೆ ಅವಕಾಶ ಕೊಡದೇ ಹೋದರೆ ಅನೇಕ ಗಹನವಾದ ಕೆಲವು ವಿಷಯಗಳು ಆಚೆ ಬರುವುದಿಲ್ಲ.

ಅಧ್ಯಕ್ಷರು : ನೋಡಿ ಮಾಧುಸ್ವಾಮಿಯವರೆ, ಇಡೀ ದಿವಸ ಪ್ರಶ್ನೋತ್ತರ ವೇಳೆಯನ್ನು ನಡೆಸುವುದಕ್ಕಾಗುತ್ತದೆಯೇ? ಈ ರೀತಿ ಅವಕಾಶ ಕೊಟ್ಟರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಪ್ರಶ್ನೆ ಕೇಳಿದ್ದು ಆ ಯೋಜನೆಯನ್ನು ನಿಲ್ಲಿಸುವುದಕ್ಕೆ ಕಾರಣ ಏನು ಎಂದು ಅದಕ್ಕೆ ಅವರು ಉತ್ತರಿಸಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಪ್ಲಿಮೆಂಟರಿ ಕ್ವೊಶ್ಚನ್ ಕೇಳುವುದೇ ಬೇಡ ಎಂದು ತಾವು ಹೇಳಿದರೆ ಹೇಗೆ ಸಾರ್?

ಅಧ್ಯಕ್ಷರು : ತಾವು ಎಲ್ಲರೂ ಸಹಕಾರ ಕೊಡಬೇಕು; I can not understand ಒಂದು ಗಂಟೆಯೊಳಗೆ ಪ್ರಶ್ನೋತ್ತರ ಮುಗಿಯಬೇಕು; ಎಲ್ಲಾ ಪ್ರಶ್ನೆಗಳು ಸಾರ್ವಜನಿಕ ಮಹತ್ವ ಆಗಿರುವುದಿಲ್ಲ, ಯಾವುದಕ್ಕೆ ಕೊಡಬೇಕು ಅದಕ್ಕೆ ಕೊಡಬೇಕಾಗುತ್ತದೆ, ಉದಾಹರಣೆಗೆ ನುಸಿ ವಿಷಯಕ್ಕೆ ಸಂಬಂಧಿಸಿದಂತೆ ಅವಕಾಶ ಕೊಟ್ಟಿದ್ದೇನೆ. ಐ ಕಾಂಟ್ ಅಂಡರ್‌ಸ್ಟ್ಯಾಂಡ್; ಏನು ಬೇಕಾದರೂ ಮಾಡಿಕೊಳ್ಳಿ..

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ರಸ್ತೆಗಳ ಬಗ್ಗೆ ಹೇಳಲಿಲ್ಲ, ಸಂತೆ ಅಭಿವೃದ್ಧಿ ಮಾಡುತ್ತೇನೆಂದರು, ತಾವು ಬೇಡ ಎಂದರೆ ಬೇಡ ಬಿಡಿ, ನಾವು ಇಲ್ಲಿ ಪ್ರಶ್ನೆ ಕೇಳುವುದು ಅದರಿಂದ ಸರ್ಕಾರಿಂದ ಏನಾದರೂ ಪರಿಹಾರ ಸಿಗಲಿ ಅಂತ, ಟೆಕ್ನಿಕಲ್ ಆಗಿ ಎದ್ದು ನಿಂತುಕೊಳ್ಳುವುದು. ಅವರು ಹೇಳುವುದು ಇವರು ಕುಳಿತುಕೊಳ್ಳುವುದು ಎಂದರೆ ಅಷ್ಟೇ ಮಾಡೋಣ ಬಿಡಿ ಸಾರ್.

ಅಧ್ಯಕ್ಷರು : ಅವರು ಎಲ್ಲಾ ವಿವರ ಹೇಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ನನ್ನ ಪ್ರಶ್ನೆ ದಯವಿಟ್ಟು ಅರ್ಥ ಮಾಡಿಕೊಳ್ಳಿ. ನಾನು ಕೇಳಿದ್ದು ರಸ್ತೆ ಮಾಡುತ್ತಿದ್ದಂಥ ಕಾರ್ಯಕ್ರಮವನ್ನು ನಿಲ್ಲಿಸಿದ್ದು ಏಕೆ? ಯಾವ ಕಾರಣಕ್ಕಾಗಿ ಎಂದು ಕೇಳಿದೆ, ಸಂತೆ ಅಭಿವೃದ್ಧಿಯ ಬಗ್ಗೆ ನಾನು ಪ್ರಶ್ನೆ ಕೇಳಲಿಲ್ಲ. ಅದನ್ನು ಬಿಟ್ಟು ಮಾನ್ಯ ಸಚಿವರು ಆರ್‌ಐಡಿಎಫ್ ಅಡಿಯಲ್ಲಿ ಸಂತೆ ಅಭಿವೃದ್ಧಿ ಮಾಡುತ್ತೇವೆಂದು ಹೇಳುತ್ತಿದ್ದಾರೆ. ನಾನು ಹೇಳಿರತಕ್ಕಂಥದ್ದು, ಹಿಂದಿನ ಸರ್ಕಾರ ಅಂದರೆ ಜನತಾದಳ ಸರ್ಕಾರ ಇದ್ದಂಥ ಸಂದರ್ಭದಲ್ಲಿ ರಿಮೋಟ್ ವಿಲೇಜೆಸ್ ಗಳಿಂದ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲಿಕ್ಕೆ ಮೇನ್ ರೋಡ್‌ಗೆ ಲಿಂಕ್ ಇರತಕ್ಕಂಥ ರಸ್ತೆಗಳನ್ನು ಅಭಿವೃದ್ಧಿ ಮಾಡತಕ್ಕಂಥ ಕಾರ್ಯಕ್ರಮ ಬಹಳ ಯಶಸ್ವಿಯಾಗಿ ನಡೆಯುತ್ತಿತ್ತು. ಯಾವ ಉದ್ದೇಶಕ್ಕಾಗಿ ಅದನ್ನು ನಿಲ್ಲಿಸಿದಿರಿ? ನಿಲ್ಲಿಸಿರತಕ್ಕಂಥ ಕಾರಣ ಏನು ಅಥವಾ ಪ್ರಾರಂಭ ಮಾಡುತ್ತೀರಾ ಇಲ್ಲವೋ ಎಂದು ಇಷ್ಟೇ ನಾನು ಕೇಳಿದ್ದು, ಅದಕ್ಕೆ ಅವರಿಂದ ಉತ್ತರ ಬರಲಿಲ್ಲ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಸದಸ್ಯರಿಗೆ ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೇ, ತಾವು ಒಂದು ಪ್ರಶ್ನೆ ಕೇಳಿಬಿಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಎಪಿಎಂಸಿ ನಲ್ಲಿ ಇದ್ದ ಗ್ರಾಂಟ್ ಅನ್ನು ನೀವು ಬೇರೆ ಕಡೆಗೆ ಬಳಸಿದ್ದೀರಿ. ಎಪಿಎಂಸಿ ಯಲ್ಲಿ ಇನ್‌ಫ್ರಾಸ್ಟ್ರಕ್ಚರ್ ಡೆವಲೆಪ್‌ಮೆಂಟ್‌ಗೆ ದುಡ್ಡು ತಿಂದು ಹಾಕಿದಿರಿ, ನೀವೇನು ಹಣವನ್ನು ಪೋಲ್ ಮಾಡಿದಿರಿ ನೂರು ಕೋಟಿ ಮಾಡುತ್ತೇವೆ, ತೊಂಭತ್ತು ಕೋಟಿ ರೂ. ಮಾಡುತ್ತೇವೆಂದು ಎಂದು ಹೇಳಿದಿರಿ, ನಮ್ಮ ಎಪಿಎಂಸಿಗಳನ್ನು ದೋಚಿ ಮಾಡಿದ್ದೀರಿ. ಅದನ್ನು ವಾಪಸ್ ಕೊಟ್ಟು, ಇನ್ ಫ್ರಾಸ್ಟ್ರಕ್ಚರ್ ಡೆವಲೆಪ್ ಮಾಡುವುದಕ್ಕೆ ಆ ಎಪಿಎಂಸಿಗೆ ಬರುವಂಥ ಮಾಲುಗಳಿಗೆ ಏನಾದರೂ ಶುಶ್ರೂಷೆ ಕೊಡುವುದಕ್ಕೆ, ತೆಂಗು ಎಪಿಎಂಸಿಯಲ್ಲಿ ಇದ್ದರೆ ತೆಂಗಿನ ಮರಕ್ಕೆ ಟ್ರೀಟ್‌ಮೆಂಟ್ ಕೊಡುವುದಕ್ಕೆ ನಿಮ್ಮ ಕಾನೂನಿನೊಳಗೆ ಏನು ಅವಕಾಶವಿದೆಯೋ ಆ ಸ್ಥಿತಿಯನ್ನು ನಿರ್ಮಾಣ ಮಾಡುತ್ತೀರೋ ಅದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಶಾಸಕರು ಏನು ಹೇಳಿದ್ದಾರೆ, ಅದಕ್ಕೆ ನಾನು ಅವರನ್ನು ಕರೆದು ಅದರ ಬಗ್ಗೆ ಸಂಪೂರ್ಣವಾದ ಮಾಹಿತಿ ತೆಗೆದುಕೊಂಡು ಅದನ್ನು ಕೊಡುವಂಥ ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಹೊಸಬರು ಇದ್ದಾರೆ, ಮಾನ್ಯ ಸದಸ್ಯರು ಮಾಹಿತಿ ಬೇಕು ಎಂದು ಹೇಳುತ್ತಾರೆ. ಮುಂದಿನ ಪ್ರಶ್ನೆಗೆ ಹೋಗೋಣ ದಯಮಾಡಿ ಎಲ್ಲರೂ ಸಹಕರಿಸಿ . ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಪ್ರಶ್ನೆ ಕೇಳಿ. ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಮಾಧುಸ್ವಾಮಿಯವರು ಹೇಳಿದ್ದು, ಸರ್ಕಾರ ಎಪಿಎಂಸಿ ಮಾರ್ಕೆಟಿಂಗ್ ಬೋರ್ಡಿನಲ್ಲಿರುವ ಹಣವನ್ನು ಬೇರೆ ಪರ್ಚೆಸ್‌ಗೆ ಯೂಸ್ ಮಾಡಿದ್ದಾರೆ ಅದನ್ನು ವಾಪಸ್ ಕೊಡಿ ಎಂದು ಕೇಳುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಕಾರಜೋಳ ಅವರೇ, ಅದನ್ನು ಅವರು ಹೇಳಿದ್ದಾರೆ. Let us go to next question.

ಶ್ರೀ ಗೋವಿಂದ ಎಂ. ಕಾರಜೋಳ : ಸರ್ಕಾರವೇ ಎಷ್ಟು ಹಣ ತೆಗೆದುಕೊಂಡಿದೆ ಎಂಬ ಮಾಹಿತಿ ಸರ್ಕಾರದ ಬಳಿ ಇಲ್ಲವೆಂದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ನಾವು ಪ್ರಶ್ನೆ ಕೇಳಿದಾಗ ಅದಕ್ಕೆ ಸರಿಯಾದ ಉತ್ತರ ಬಾರದೆ ಇನ್ನೊಂದು ಪ್ರಶ್ನೆಗೆ ಹೋಗಿ ಬಿಟ್ಟರೆ ನಾವು ಏನು ಮಾಡಬೇಕು? ನಿಯಮಾವಳಿಗಳಲ್ಲಿ ಉಪ ಪ್ರಶ್ನೆ ಕೇಳಲು ಅವಕಾಶವಿದೆ.

ಅಧ್ಯಕ್ಷರು : ಉಪ ಪ್ರಶ್ನೆ ಎಂದರೆ ಎಷ್ಟು ಕೇಳುವುದು? ಇಲ್ಲಿ ತಾವು ದಯಮಾಡಿ ಕೇಳಿ, ಎಲ್ಲಾ ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶವಿಲ್ಲ. ಸಂಬಂಧಪಟ್ಟ ಸದಸ್ಯರು ಮೂರು ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶವಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಪ್ರಶ್ನೆ ಕೇಳಿರುವವನು ನನಗೆ ತಾವು ಅವಕಾಶ ಕೊಡಬೇಕಲ್ಲವೆ? ನಾನು ಸ್ಪಷ್ಟವಾಗಿ ಯಾವ ಕಾರಣಕ್ಕಾಗಿ ಆ ಯೋಜನೆಯನ್ನು ನಿಲ್ಲಿಸಿದಿರಿ? ಮಾನ್ಯ ಮಾಧುಸ್ವಾಮಿಯವರು ಅಲ್ಲ ಉತ್ತರ ಕೊಡಬೇಕಾಗಿರುವುದು; ಮಾನ್ಯ ಸಚಿವರು ಸ್ಪಷ್ಟವಾಗಿ ಉತ್ತರ ಕೊಡಬೇಕಾಗುತ್ತದೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ, ಎಷ್ಟೋ ಎಪಿಎಂಸಿಗಳು ನಷ್ಟದಲ್ಲಿರುವುದರಿಂದ ಆ ಕಾರ್ಯಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗಿಲ್ಲ. ನಷ್ಟದಲ್ಲಿರುವುದರಿಂದ

ಆರ್‌ಐಡಿಎಫ್ 10ರ ಯೋಜನೆಯ ಅಡಿಯಲ್ಲಿ ಈಗ ಗ್ರಾಮೀಣ ಸಂತೆಗಳನ್ನು ಹೇಗೆ ತೆಗೆದುಕೊಂಡಿದ್ದಾರೆ, ಅದೇ ರೀತಿ ಗ್ರಾಮೀಣ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಒಂದು ವಿಚಾರ ನಾವು ಇಟ್ಟುಕೊಂಡು ಅದನ್ನು ಮಾಡುತ್ತಿದ್ದೇವೆ, ಅವರನ್ನು ಕರೆದು ಅವರು ಏನು ಸಲಹೆ ಕೊಡುತ್ತಾರೆ ಆ ಪ್ರಕಾರ ನಾವು ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರೇ ತಮ್ಮ ಪ್ರಶ್ನೆಯನ್ನು ಕೇಳಿ. ದಯಮಾಡಿ ಎಲ್ಲರೂ ಸಹಕರಿಸಬೇಕು, ಈಗ ಏಳು ಪ್ರಶ್ನೆ ಮುಗಿದಿವೆ ಇನ್ನು ಉಳಿದ ಪ್ರಶ್ನೆಗಳು ಮುಗಿದಿಲ್ಲ. ಈಗ ಕೇವಲ 20 ನಿಮಿಷಗಳು ಮಾತ್ರ ಇವೆ ಉಳಿದ ಪ್ರಶ್ನೆಗಳನ್ನು ಹಾಗೆಯೇ ಬಿಟ್ಟು ಬಿಡುವುದಾ? ದಯಮಾಡಿ ಕುಳಿತುಕೊಳ್ಳಿ, This is not the way. ದಯಮಾಡಿ ಕುಳಿತುಕೊಳ್ಳಬೇಕು.

ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಬಿಸಿಯೂಟದ ಜೊತೆ ಹಾಲು ನೀಡುವ ಬಗ್ಗೆ

23 (79) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಲ್ಲಾ ಹಾಲು ಒಕ್ಕೂಟಗಳಿಂದ ಪ್ರತಿದಿನ ಉತ್ಪಾದನೆಯಾಗುವ ಹಾಲಿನ ಪ್ರಮಾಣವೆಷ್ಟು;

ಆ) ಪ್ರತಿದಿನ ಸರಾಸರಿ ಇರತಕ್ಕ ಬೇಡಿಕೆ ಎಷ್ಟು;

ಇ) ಉತ್ಪಾದನೆಯಾಗುವ ಅಧಿಕ ಹಾಲನ್ನು ಯಾವರೀತಿ ವಿತರಣೆ ಮಾಡಲಾಗುತ್ತದೆ;

ಈ) ರಾಜ್ಯಕ್ಕೆ ಪ್ರತಿದಿನ ಬೇರೆ ರಾಜ್ಯಗಳಿಂದ ಬರತಕ್ಕ ಹಾಲಿನ ಪ್ರಮಾಣವೆಷ್ಟು;

ಉ) ಬೇರೆ ರಾಜ್ಯಗಳಿಂದ ಬರತಕ್ಕ ಹಾಲಿನ ಪ್ರಮಾಣವನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಊ) ರಾಜ್ಯದಲ್ಲಿ ಅಧಿಕ ಹಾಲನ್ನು ಸದುಪಯೋಗಪಡಿಸಿಕೊಳ್ಳಲು ಹೊಸದಾಗಿ ಹಾಲಿನ ಪುಡಿ ತಯಾರಿಕಾ ಘಟಕಗಳನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಋ) ರಾಜ್ಯದಲ್ಲಿ ಪ್ರಾಥಮಿಕ ಶಾಲೆ ಮಕ್ಕಳಿಗೆ ಬಿಸಿಯೂಟದ ಜತೆಗೆ ಹಾಲನ್ನು ನೀಡಲು ಸರ್ಕಾರ ನಿರ್ಧರಿಸಿದೆಯೇ;

ಋೂ) ಹಾಗಿದ್ದಲ್ಲಿ ಇದಕ್ಕಾಗಿ ಬೇಕಾಗುವ ಹಾಲಿನ ಪ್ರಮಾಣವೆಷ್ಟು?

ಶ್ರೀ ಮುರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ರಾಜ್ಯದಲ್ಲಿ ಎಲ್ಲಾ ಹಾಲು ಒಕ್ಕೂಟಗಳಿಂದ ಜುಲೈ ಮೊದಲ ವಾರದಲ್ಲಿ ದಿನವಹಿ ಸರಾಸರಿ 27.75 ಲಕ್ಷ ಲೀಟರ್‌ಗಳಷ್ಟು ಹಾಲು ಉತ್ಪಾದನೆಯಾಗಿರುತ್ತದೆ.

ಆ) ಜುಲೈ ಮೊದಲ ವಾರದಲ್ಲಿ ಸರಾಸರಿ ದಿನವಹಿ 15.56 ಲಕ್ಷ ಲೀಟರ್ ಹಾಲು ಎಲ್ಲಾ ಹಾಲು ಒಕ್ಕೂಟಗಳ ಮುಖಾಂತರ ಮಾರಾಟವಾಗಿರುತ್ತದೆ.

ಇ) ದಿನವಹಿ 12.19 ಲಕ್ಷ ಲೀಟರ್ ಅಧಿಕ ಹಾಲು ಶೇಖರಣೆಯಾಗುತ್ತಿದ್ದು ಅದರ ವಿಲೇವಾರಿ ಈ ಕೆಳಕಂಡಂತೆ ಮಾಡಲಾಗಿರುತ್ತದೆ.